# ಕರ್ನಾಟಕ ಲೋಕಾಯುಕ್ತ

ಸಂಖ್ಯೆ: ಉಪಲೋಕ್–2/ಡಿಇ–128/2020/ಅನವಿ–15

ಬಹುಮಹಡಿಗಳ ಕಟ್ಟಡ,
ಡಾ: ಬಿ.ಆರ್. ಅಂಬೇಡ್ಕರ್ ವೀಧಿ,
ಬೆಂಗಳೂರು, ದಿನಾಂಕ: 14/03/2023.

## -:: ವಿಚಾರಣಾ ವರದಿ ::-

**ವಿಷಯ:** (1) ಶ್ರೀ ಟಿ.ವೆಂಕಟೇಶ್, ಹಿಂದಿನ ಸಹಾಯಕ ಕಾರ್ಯಪಾಲಕ ಅಭಿಯಂತರರು (ನಿವೃತ್ತ), ಪಂಚಾಯತ್ ರಾಜ್ ಇಂಜಿನಿಯರಿಂಗ್ ಉಪ–ವಿಭಾಗ, ಸಾಗರ, ಶಿವಮೊಗ್ಗ ಜಿಲ್ಲೆ ಮತ್ತು (2) ಶ್ರೀ ಎಂ.ಸಿ. ಕುಮಾರ್, ಸಹಾಯಕ ಅಭಿಯಂತರರು, ಪಂಚಾಯತ್ ರಾಜ್ ಇಂಜಿನಿಯರಿಂಗ್ ಉಪ–ವಿಭಾಗ, ಸಾಗರ, ಶಿವಮೊಗ್ಗ ಜಿಲ್ಲೆ ಇವರುಗಳ ವಿರುದ್ಧದ ಇಲಾಖಾ ವಿಚಾರಣೆ ಸಂಬಂಧ ವಿಚಾರಣಾ ವರದಿ.

**ಉಲ್ಲೇಖ:–** 1) ನಾಮನಿರ್ದೇಶನ ಆದೇಶ ಸಂಖ್ಯೆ: ಉಪಲೋಕ್–2/ಡಿಇ–128/2020, ದಿನಾಂಕ: 18/06/2020.
2) ಸರ್ಕಾರಿ ಆದೇಶ ಸಂಖ್ಯೆ: ಗ್ರಾಅಪ/13/ಇಎನ್‌ಕ್ಯೂ/2020/ ಬೆಂಗಳೂರು, ದಿನಾಂಕ: 08/06/2020.

******

ಆಪಾದಿತ ಸರ್ಕಾರಿ ನೌಕರರುಗಳಾದ (1) ಶ್ರೀ ಟಿ.ವೆಂಕಟೇಶ್, ಹಿಂದಿನ ಸಹಾಯಕ ಕಾರ್ಯಪಾಲಕ ಅಭಿಯಂತರರು (ನಿವೃತ್ತ), ಪಂಚಾಯತ್ ರಾಜ್ ಇಂಜಿನಿಯರಿಂಗ್ ಉಪ–ವಿಭಾಗ, ಸಾಗರ, ಶಿವಮೊಗ್ಗ ಜಿಲ್ಲೆ ಮತ್ತು (2) ಶ್ರೀ ಎಂ.ಸಿ. ಕುಮಾರ್, ಸಹಾಯಕ ಅಭಿಯಂತರರು, ಪಂಚಾಯತ್ ರಾಜ್ ಇಂಜಿನಿಯರಿಂಗ್ ಉಪ–ವಿಭಾಗ, ಸಾಗರ, ಶಿವಮೊಗ್ಗ ಜಿಲ್ಲೆ (ಇನ್ನು ಮುಂದೆ **ಅಸನೌ 1 & 2** ಎಂದು ಕರೆಯಲ್ಪಡುತ್ತಾರೆ) ಇವರುಗಳ ವಿರುದ್ಧ ಇಲಾಖಾ ವಿಚಾರಣೆ.

2. ಈ ಮೇಲೆ ಉಲ್ಲೇಖ–2ರಂತೆ ಹೊರಡಿಸಿರುವ ಸರ್ಕಾರಿ ಆದೇಶದನ್ವಯ, ಗೌರವಾನ್ವಿತ ಉಪಲೋಕಾಯುಕ್ತ–2ರವರು ಉಲ್ಲೇಖ–1ರಂತೆ ಅಪರ ನಿಬಂಧಕರು ವಿಚಾರಣೆಗಳು–15ರವರನ್ನು ಈ ಮೇಲೆ ತಿಳಿಸಿರುವ ಸರ್ಕಾರಿ ಆಪಾದಿತ ನೌಕರ–1 ಮತ್ತು 2ರವರ ವಿರುದ್ಧ ದೋಷಾರೋಪಣೆ ರಚಿಸಿ ವಿಚಾರಣೆ ನಡೆಸುವಂತೆ ನಾಮನಿರ್ದೇಶನ ಆದೇಶ ಹೊರಡಿಸಿರುತ್ತಾರೆ.

ಪ್ರಕರಣದ ಸಾರಾಂಶ:- ದೂರುದಾರರು ತಮ್ಮ ದೂರಿನಲ್ಲಿ 2016-17ನೇ ಸಾಲಿನ ಸಾಗರ ತಾಲ್ಲೂಕು ರಾಜ್ಯ ಹೆದ್ದಾರಿ-1ರ ಪಡುಬಿದ್ರೆ ಚಿಕ್ಕಗೋಡು ರಸ್ತೆಯಿಂದ ಹಿರೇಹಾರಕ್ಕೆ, ಹೊಸಕೊಪ್ಪಕ್ಕೆ, ಕಂಚಿಗಾಪುರಕ್ಕೆ ಮತ್ತು ಕಲಂದೂರಿಗೆ ಹೋಗುವ ರಸ್ತೆ ಅಭಿವೃದ್ಧಿಗೆ ತಲಾ ರೂ.5.00 ಲಕ್ಷ ಹಾಗೂ ಸಾಗರ ತಾಲ್ಲೂಕು ರಾಷ್ಟ್ರೀಯ ಹೆದ್ದಾರಿ-206ರ ಹೊನ್ನಾವರ-ತುಮಕೂರು ರಸ್ತೆಯಿಂದ ಇಸ್ಲಾಂಪುರಕ್ಕೆ, ಖೈರಕ್ಕೆ ಮತ್ತು ಮೆನಸಿನಪುರಕ್ಕೆ ಹೋಗುವ ರಸ್ತೆ ಅಭಿವೃದ್ಧಿಗೆ ತಲಾ ರೂ.5.00 ಲಕ್ಷಗಳು ಮಂಜೂರಾಗಿದ್ದು, ಸದರಿ ಕಾಮಗಾರಿಗಳು ಕಳಪೆಯಾಗಿವೆ. ಆದರೆ, ಎದುರುದಾರರು ಸದರಿ ಕಾಮಗಾರಿಗಳಿಗೆ ಸಂಬಂಧಪಟ್ಟಂತೆ ಬಿಲ್ ತಯಾರಿಸಿ ಹಣ ದುರುಪಯೋಗ ಪಡಿಸಿಕೊಂಡಿರುತ್ತಾರೆಂದು ಆಪಾದಿಸಿ ಈ ಸಂಸ್ಥೆಗೆ ದೂರು ಸಲ್ಲಿಸಿರುತ್ತಾರೆ.

3. ಆಪಾದಿತ ಸರ್ಕಾರಿ ನೌಕರ-1 ಮತ್ತು 2ರವರುಗಳ ವಿರುದ್ಧ ಇಲಾಖಾ ವಿಚಾರಣೆ ನಡೆಸಲು ಮೇಲ್ನೋಟಕ್ಕೆ ಸಾಕಷ್ಟು ಅಂಶಗಳು ಕಂಡುಬಂದ ಕಾರಣ ಗೌರವಾನ್ವಿತ ಉಪಲೋಕಾಯುಕ್ತರವರು ದಿನಾಂಕ: 07/02/2020ರಂದು ಕರ್ನಾಟಕ ಲೋಕಾಯುಕ್ತ ಕಾಯ್ದೆ 1984 ಕಲಂ 12(3)ರಡಿ ವರದಿಯನ್ನು ಸಲ್ಲಿಸಿಕೊಂಡಿರುತ್ತಾರೆ.

4. ಆಪಾದಿತ ಸರ್ಕಾರಿ ನೌಕರ-1 ಮತ್ತು 2 ರವರುಗಳ ವಿರುದ್ಧ ಈ ಕೆಳಕಂಡಂತೆ ದೋಷಾರೋಪಣೆಯನ್ನು ಹೊರಿಸಲಾಗಿರುತ್ತದೆ.

*"ಆಪಾದಿತ ಸರ್ಕಾರಿ ನೌಕರ-1 ಆದ ನೀವು, ರಸ್ತೆ ಸುರಕ್ಷತಾ ಯೋಜನೆ 2016-17ನೇ ಸಾಲಿನ ಲೆಕ್ಕ ಶೀರ್ಷಿಕೆ ಅಡಿ ಸಾಗರ ತಾಲ್ಲೂಕು, ರಾಷ್ಟ್ರೀಯ ಹೆದ್ದಾರಿ-206ರ ಹೊನ್ನಾವರ-ತುಮಕೂರು ರಸ್ತೆಯಿಂದ (1) ಇಸ್ಲಾಂಪುರ, (2) ಖೈರಾ ಮತ್ತು (3) ಮೆಣಸಿನಪುರಕ್ಕೆ ಹೋಗುವ ರಸ್ತೆಗಳನ್ನು ಅಭಿವೃದ್ಧಿಪಡಿಸುವುದು ಮತ್ತು ಸಾಗರ ತಾಲ್ಲೂಕು ರಾಜ್ಯ ಹೆದ್ದಾರಿ-1ರ ಪಡುಬಿದ್ರೆ-ಚಕ್ಕಲಗೋಡು ರಸ್ತೆಯಿಂದ (1) ಹಿರೇಹಾರ, (2) ಹೊಸಕೊಪ್ಪ, (3) ಕೆಂಚಿಗಾಪುರ ಮತ್ತು (4) ಮಲದೂರಿಗೆ ಹೋಗುವ ರಸ್ತೆಗಳನ್ನು ಅಭಿವೃದ್ಧಿ ಪಡಿಸುವ ಸದರಿ ಕಾಮಗಾರಿಗಳನ್ನು ಅನುಷ್ಠಾನಗೊಳಿಸಿದ್ದು, ಕಾಮಗಾರಿಗಳ ಅಂದಾಜು ತಲಾ ರೂ.5,00,000/- ಗಳಾಗಿದ್ದು, ತುಂಡು ಗುತ್ತಿಗೆ ಕರಾರುಗಳ ಅಡಿ ಕಾಮಗಾರಿಯನ್ನು ವಹಿಸಲು ನಿಮಗೆ ಅಧಿಕಾರ ಇಲ್ಲದಿದ್ದರೂ ಸಹಾ, 7 ಗುತ್ತಿಗೆದಾರರಿಗೆ ವಹಿಸಿಕೊಟ್ಟಿರುತ್ತೀರಿ ಹಾಗೂ*

*ಸದರಿ ಕರಾರು ಪತ್ರಗಳಲ್ಲಿ ಪ್ರಮುಖವಾದ ಅಂಶಗಳನ್ನು ಭರ್ತಿಮಾಡದೇ ದಿನಾಂಕ, ಕಾಮಗಾರಿಯ ಹೆಸರು, ಲೆಕ್ಕ ಶೀರ್ಷಿಕೆ ನಮೂದಿಸಿರುವುದು, ಸಾಮಾನ್ಯವಾಗಿ ಎಲ್ಲಾ ಕಾಮಗಾರಿಗಳನ್ನು ಮುಕ್ತಾಯಗೊಂಡ ದಿನದಿಂದ ಕಾಮಗಾರಿಯ ಅಳತೆ ನಮೂದಿಸಿದ್ದು, ಹಾಗೂ ಚೆಕ್ ಮೆಸರ್‌ಮೆಂಟನ್ನು ಮಾಡಿರುವುದು ಕಂಡುಬಂದಿದ್ದು, ಎಲ್ಲಾ ಕಾಮಗಾರಿಗಳನ್ನು ಅಪಾದಿತ ಸರ್ಕಾರಿ ನೌಕರ-2 ಆದ ನೀವು ಗುತ್ತಿಗೆದಾರರಿಂದ ನಿರ್ವಹಿಸಿ ಸರಿಯಾಗಿ ಅಳತೆ ನಮೂದಿಸಿರುವುದಿಲ್ಲ, 1ನೇ ಅಪಾದಿತ ಸರ್ಕಾರಿ ನೌಕರ ಆದ ನೀವು ಚೆಕ್ ಮೆಸರ್‌ಮೆಂಟ್ ಮಾಡಿದ್ದು, ಅಂದಾಜು ಪಟ್ಟಿಯಲ್ಲಿನ ಅಂಶಗಳನ್ನು ಯಥಾವತ್ತಾಗಿ ಅಳತೆ ವಹಿಯಲ್ಲಿ ಏಕಕಾಲಕ್ಕೆ ದಾಖಲಿಸಿದಂತೆ ಕಂಡುಬಂದಿದ್ದು, ಬಿಲ್ಲುಗಳಲ್ಲಿ ದಿನಾಂಕವನ್ನು ನಮೂದಿಸದೆ, ಸಹಿ ಮಾಡಿ ಅಪಾದಿತ ಸರ್ಕಾರಿ ನೌಕರ-1 ಮತ್ತು 2 ಆದ ನೀವುಗಳು, ಕರ್ತವ್ಯ ಪಾಲನೆಯಲ್ಲಿ ನಿಷ್ಠೆಯನ್ನು ತೋರದೆ, ಕರ್ತವ್ಯಲೋಪವೆಸಗಿ, ದುರ್ನಡತೆ ಎಸಗಿ, ನಿಯಮಗಳನ್ನು ಉಲ್ಲಂಘಿಸಿ, ಸಾರ್ವಜನಿಕ/ಸರ್ಕಾರಿ ನೌಕರರಿಗೆ ತರವಲ್ಲದ ರೀತಿಯಲ್ಲಿ ನಡೆದುಕೊಂಡು, ಕರ್ನಾಟಕ ನಾಗರೀಕ ಸೇವಾ ನಿಯಮಗಳು (ನಡತೆ) 1966 ನಿಯಮ 3(1)ರ ಅಡಿಯಲ್ಲಿ ದುರ್ನಡತೆಯನ್ನೆಸಗಿರುತ್ತೀರಿ."*

5. ರಚನೆ ಮಾಡಲಾದ ದೋಷಾರೋಪಣೆ ಪಟ್ಟಿ, ದೋಷಾರೋಪಣೆ ವಿವರಗಳು ಹಾಗೂ ಸಾಕ್ಷಿದಾರರ ಮತ್ತು ದಾಖಲೆಗಳ ಪಟಿಯನ್ನು ಅಪಾದಿತ ಸರ್ಕಾರಿ ನೌಕರರಿಗೆ ಜಾರಿ ಮಾಡಲಾಗಿತ್ತು. ಸದರಿಯವರು ದಿನಾಂಕ: 15/10/2020ರಂದು ವಿಚಾರಣಾಧಿಕಾರಿಗಳ ಮುಂದೆ ತಮ್ಮ ವಕೀಲರ ಮುಖಾಂತರ ಹಾಜರಾಗಿರುತ್ತಾರೆ. ಅದೇ ದಿನದಂದು ಅವರುಗಳ ಪ್ರಥಮ ಮೌಖಿಕ ಹೇಳಿಕೆಗಳನ್ನು ದಾಖಲು ಮಾಡಿಕೊಂಡಿದ್ದು, ದೋಷಾರೋಪಣೆ ಪಟ್ಟಿಯಲ್ಲಿನ ಆಪಾದನೆಗಳನ್ನು ನಿರಾಕರಿಸಿ, ವಿಚಾರಣೆಯಾಗಬೇಕೆಂದು ಆಪಾದಿತ ಸರ್ಕಾರಿ ನೌಕರ-1 ಮತ್ತು 2ರವರು ನಿವೇದಿಸಿಕೊಂಡ ಕಾರಣ ಪ್ರಕರಣವನ್ನು ಪ್ರತಿವಾದ ಪತ್ರ/ಆಕ್ಷೇಪಣೆಗಳಿಗಾಗಿ ನಿಗದಿಪಡಿಸಲಾಯಿತು.

6. ದಿನಾಂಕ: 26/02/2021ರಂದು ಆಪಾದಿತ ಸರ್ಕಾರಿ ನೌಕರ-1 ಮತ್ತು 2ರವರು ತಮ್ಮ ಪ್ರತಿವಾದ ಪತ್ರ/ಆಕ್ಷೇಪಣೆಗಳನ್ನು ಸಲ್ಲಿಸಿ ದೂರಿನಲ್ಲಿ ಉಲ್ಲೇಖಿಸಿರುವ ಕಾಮಗಾರಿಗಳಿಗೆ ಸಂಬಂಧಪಟ್ಟಂತೆ ಮುಖ್ಯ ಅಭಿಯಂತರರು, ಪಂಚಾಯತ್ ರಾಜ್

ಇಂಜಿನಿಯರಿಂಗ್ ಇಲಾಖೆ ಇವರು ದಿನಾಂಕ: 02/09/2016ರಂದು ಅನುಮೋದನೆ ನೀಡಿದ್ದು, ಅಂದಾಜು ಪಟ್ಟಿಗಳಿಗೆ ಕಾರ್ಯಪಾಲಕ ಅಭಿಯಂತರರು, ಪಿ.ಆರ್.ಇ.ಡಿ., ಸಾಗರ ಇವರು ತಾಂತ್ರಿಕ ಅನುಮೋದನೆಯನ್ನು ನೀಡಿದ್ದು, 7 ಕಾಮಗಾರಿಗಳಿಗೆ ಸಂಬಂಧಪಟ್ಟಂತೆ ತುಂಡು ಗುತ್ತಿಗೆ ಕರಾರುಗಳನ್ನು ಕಾರ್ಯಪಾಲಕ ಅಭಿಯಂತರರೇ ಛಾಪಾ ಕಾಗದದಲ್ಲಿ ಕಾಮಗಾರಿಗಳನ್ನು ವಿವರಿಸಿ ಸಹಿ ಮಾಡಿ ಗುತ್ತಿಗೆದಾರರ ಸಹಿಗಳನ್ನು ಸಹಾ ಪಡೆದಿರುವುದರಿಂದ ತಾವು ಯಾವುದೇ ಕರ್ತವ್ಯಲೋಪ ಎಸಗಿರುವುದಿಲ್ಲವೆಂದು ತಿಳಿಸಿರುತ್ತಾರೆ. ಅನುಮೋದಿತ ಅಂದಾಜು ಪಟ್ಟಿಯಂತೆ ಪ್ರತಿಯೊಂದು ಕಾಮಗಾರಿಗಳನ್ನು ಅನುಷ್ಠಾನಗೊಳಿಸಿ ಅಳತೆ ಮಾಡಿ ಅಳತೆ ಪುಸ್ತಕದಲ್ಲಿ ದಾಖಲಿಸಲಾಗಿರುತ್ತದೆ ಹಾಗೂ ಪರಿಶೀಲಿಸಿದ ನಂತೆ ಸಹಿಗಳನ್ನು ಮಾಡಿದ್ದು ದಾಖಲಿಸಿದ ಅಳತೆಗಳಲ್ಲಿ ಯಾವುದೇ ವ್ಯತ್ಯಾಸಗಳಿಲ್ಲದೆ ಇರುವುದರಿಂದ ತಾವು ಯಾವುದೇ ಕರ್ತವ್ಯ ಲೋಪವೆಸಗಿರುವುದಿಲ್ಲವೆಂದು ತಿಳಿಸಿರುತ್ತಾರೆ. ಇದಲ್ಲದೆ ಲೋಕಾಯುಕ್ತ ಸಂಸ್ಥೆಯ ತಾಂತ್ರಿಕ ವಿಭಾಗದ ಕಾರ್ಯಪಾಲಕ ಅಭಿಯಂತರರು ತಮಗೆ ನೋಟೀಸುಗಳನ್ನು ನಿಡಿ ಸ್ಥಳ ತನಿಖೆ ಮಾಡಿ ಕಾಮಗಾರಿಗಳ ಅನುಷ್ಠಾನದಲ್ಲಿ ಯಾವುದೇ ಲೋಪಗಳು ಇರುವುದಿಲ್ಲವೆಂದು ವರದಿಯನ್ನು ಸಹಾ ತಯಾರಿಸಿರುವುದರಿಂದ ತಪ್ಪು ಗ್ರಹಿಕೆಯಿಂದ ತಮ್ಮ ಮೇಲೆ ಸಲ್ಲಿಸಿರುವ ದೂರು ಊರ್ಜಿತ ಆಗಿರುವುದಿಲ್ಲ ಹಾಗೂ ವಿಚಾರಣೆಯಿಂದ ಮುಕ್ತಗೊಳಿಸಬೇಕೆಂದು ಕೋರಿರುತ್ತಾರೆ.

7. ಆಪಾದಿತ ಸರ್ಕಾರಿ ನೌಕರನ ವಿರುದ್ಧ ರಚಿಸಲಾದ ದೋಷಾರೋಪಣೆಯನ್ನು ರುಜುವಾತು ಪಡಿಸಲು ಶಿಸ್ತುಪ್ರಾಧಿಕಾರವು ದೂರುದಾರರನ್ನು ಪ್ರಾಸಾ-1 ರಂತೆ ವಿಚಾರಣೆಗೊಳಪಡಿಸಿ, 4 ದಾಖಲೆಗಳನ್ನು ನಿಶಾನೆ ಪಿ-1 ರಿಂದ ಪಿ-4 ರವರೆಗೆ ಗುರುತಿಸಿಕೊಂಡಿರುತ್ತದೆ.

8. ಶಿಸ್ತು ಪ್ರಾಧಿಕಾರದ ಪರ ಸಾಕ್ಷ್ಯ ಮುಕ್ತಾಯಗೊಂಡ ನಂತರ ದಿನಾಂಕ: 21/12/2021ರಂದು ಆಪಾದಿತ ಸರ್ಕಾರಿ ನೌಕರ-1 ಮತ್ತು 2ರವರ 2ನೇ ಮೌಖಿಕ ಹೇಳಿಕೆಗಳನ್ನು ದಾಖಲು ಮಾಡಿಕೊಳ್ಳಲಾಯಿತು. ತಮ್ಮ ಪರ ಯಾವುದೇ ಸಾಕ್ಷ್ಯಾಧಾರ ಇಲ್ಲವೆಂದು ನಿವೇದಿಸಿಕೊಂಡಿದ್ದು, ತಾವು ಈಗಾಗಲೇ ಪ್ರಾಸಾ-1ರವರ ಮೂಲಕ 2 ದಾಖಲೆಗಳನ್ನು ನಿಶಾನೆ ಡಿ-1 ಮತ್ತು ಡಿ-2 ಎಂದು ಗುರ್ತಿಸಿಕೊಂಡಿರುವುದಾಗಿ ತಿಳಿಸಿರುತ್ತಾರೆ.

9. ಆಪಾದಿತ ಸರ್ಕಾರಿ ನೌಕರ-1 ಮತ್ತು 2 ರವರು ತಮ್ಮ ಪರ ಯಾವುದೇ ಸಾಕ್ಷ್ಯ ಇರುವುದಿಲ್ಲವೆಂದು ನಿವೇದಿಸಿಕೊಂಡ ನಂತರ ಕರ್ನಾಟಕ ನಾಗರೀಕ ಸೇವಾ ನಿಯಮಾವಳಿಗಳು 1957 ನಿಯಮ 11(18) ರೀತ್ಯಾ ಪ್ರಶ್ನಾವಳಿಗೆ ಅವರುಗಳ ಉತ್ತರಗಳನ್ನು ದಾಖಲಿಸಿಕೊಳ್ಳಬೇಕಾಗಿತ್ತು. ಆದರೆ ಅವರುಗಳ ಮೇಲೆ ಅಪಾದನೆ ಹೊರಿಸುವಂತಹ ಯಾವುದೇ ಅಂಶಗಳು ಶಿಸ್ತು ಪ್ರಾಧಿಕಾರ ಮಂಡಿಸಿದ ಸಾಕ್ಷ್ಯದಲ್ಲಿ ಲಭ್ಯವಾಗದೇ ಇರುವ ಕಾರಣ ಹಾಗೂ ಸದರಿ ಅಧಿಕಾರಿಗಳು ಕಾಮಗಾರಿಗಳನ್ನು ಅನುಷ್ಠಾನಗೊಳಿಸಿ ಹಣ ದುರುಪಯೋಗ ಮಾಡಿಕೊಂಡಿರುವುದಿಲ್ಲ ಎಂದು ಈ ಸಂಸ್ಥೆಯ ತಾಂತ್ರಿಕ ವಿಭಾಗ ಕಾರ್ಯಪಾಲಕ ಅಭಿಯಂತರರು-3 ರವರು ವರದಿಯನ್ನು ಸಲ್ಲಿಸಿರುವ ಹಿನ್ನೆಲೆಯಲ್ಲಿ ನಿಯಮ 11(18) ರೀತ್ಯಾ ಪ್ರಶ್ನಾವಳಿಗೆ ಆಪಾದಿತ ಅಧಿಕಾರಿಗಳ ಉತ್ತರಗಳನ್ನು ದಾಖಲಿಸಿಕೊಳ್ಳುವುದನ್ನು ಕೈಬಿಡಲಾಗಿರುತ್ತದೆ.

10. ಉಭಯ ಪಕ್ಷಕಾರರ ವಾದ-ವಿವಾದಗಳನ್ನು ಆಲಿಸಲಾಯಿತು. ಕಡತದಲ್ಲಿ ಲಭ್ಯವಿರುವ ಎಲ್ಲಾ ದಾಖಲೆಗಳನ್ನು ಹಾಗೂ ಅಪಾದಿತ ಸರ್ಕಾರಿ ನೌಕರನ ಪರವಾಗಿ ಸಲ್ಲಿಸಲಾದ ಲಿಖಿತ ವಾದಗಳನ್ನು ಪರಿಶೀಲಿಸಲಾಯಿತು.

11. ಈ ಮೇಲೆ ಪ್ರಸ್ತಾಪಿಸಲಾದ ಸಂಗತಿ ಹಾಗೂ ಸನ್ನಿವೇಶಗಳನ್ವಯ ನನ್ನ ಪರಿಗಣನೆಗೆ ಉದ್ಭವಿಸುವ ಅಂಶ ಈ ಕೆಳಕಂಡಂತೆ ಇರುತ್ತದೆ.

> ***ಅಂಶ-1:*** *ರಸ್ತೆ ಸುರಕ್ಷತಾ ಯೋಜನೆ 2016-17ನೇ ಸಾಲಿನ ಲೆಕ್ಕ ಶೀರ್ಷಿಕೆಯಡಿ ಸಾಗರ ತಾಲ್ಲೂಕು ರಾಜ್ಯ ಹೆದ್ದಾರಿ-1 ಪಡುಬಿದ್ರೆ-ಚಿಕ್ಕಲಗೋಡು ರಸ್ತೆಯ ಮುಖಾಂತರ ಹೋಗುವ ಗ್ರಾಮದ ರಸ್ತೆಗಳನ್ನು ಅಭಿವೃದ್ಧಿ ಪಡಿಸುವುದು ಮತ್ತು ಸಾಗರ ತಾಲ್ಲೂಕು ರಾಷ್ಟ್ರೀಯ ಹೆದ್ದಾರಿ 206 ರ ಹೊನ್ನಾವರ – ತುಮಕೂರು ರಸ್ತೆಯ ಮುಖಾಂತರ ಹೋಗುವ ಗ್ರಾಮದ ರಸ್ತೆಗಳನ್ನು ಅಭಿವೃದ್ಧಿ ಪಡಿಸುವ ಕಾಮಗಾರಿಗಳಿಗೆ ಅಂದಾಜು ತಲಾ ರೂ.5.00 ಲಕ್ಷ ಮಂಜೂರಾಗಿದ್ದು ತುಂಡು ಗುತ್ತಿಗೆ ಕರಾರುಗಳಡಿ ಕಾಮಗಾರಿಯನ್ನು ವಹಿಸಲು ಅಧಿಕಾರ ಇರದೆ ಇದ್ದರೂ 7 ಗುತ್ತಿಗೆದಾರರಿಗೆ ವಹಿಸಿಕೊಟ್ಟು ಎಲ್ಲಾ ಕಾಮಗಾರಿಗಳನ್ನು ಅಪಾದಿತ ಸರ್ಕಾರಿ ನೌಕರ-2 ಆದ ನೀವು ಗುತ್ತಿಗೆದಾರರಿಂದ ನಿರ್ವಹಿಸಿ ಸರಿಯಾಗಿ ಅಳತೆ ನಮೂದಿಸಿರುವುದಿಲ್ಲ, 1ನೇ ಅಪಾದಿತ ಸರ್ಕಾರಿ ನೌಕರ ಆದ ನೀವು ಚೆಕ್ ಮೆಸರ್‌ಮೆಂಟ್ ಮಾಡಿದ್ದು, ಅಂದಾಜು ಪಟ್ಟಿಯಲ್ಲಿನ ಅಂಶಗಳನ್ನು ಯಥಾವತ್ತಾಗಿ*

*ಅಳತೆ ವಹಿಯಲ್ಲಿ ಏಕಕಾಲಕ್ಕೆ ದಾಖಲಿಸಿದಂತೆ ಕಂಡುಬಂದಿದ್ದು, ಬಿಲ್ಲುಗಳಲ್ಲಿ ದಿನಾಂಕವನ್ನು ನಮೂದಿಸದೆ, ಸಹಿ ಮಾಡಿ ಆಪಾದಿತ ಸರ್ಕಾರಿ ನೌಕರ-1 ಮತ್ತು 2 ಆದ ನೀವುಗಳು ಸರ್ಕಾರಿ ನೌಕರರಿಗೆ ಉಚಿತವಲ್ಲದ ರೀತಿಯಲ್ಲಿ ನಡೆದುಕೊಂಡು ದುರ್ನಡತೆ ಎಸಗಿ ಕರ್ನಾಟಕ ನಾಗರೀಕ ಸೇವಾ ನಿಯಮಗಳು (ನಡತೆ) 1966, ನಿಯಮ 3(1)(i) ರಿಂದ (iii) ರನ್ವಯ ಶಿಸ್ತು ಕ್ರಮಕ್ಕೆ ಬಾಧ್ಯರಾಗಿರುತ್ತಾರೆಂದು ಶಿಸ್ತು ಪ್ರಾಧಿಕಾರ ಯಾಕೆ ತೀರ್ಮಾನಿಸಬಾರದು ಎಂದು ಪಡೆಸುತ್ತಿದೆಯೇ?*

**ಅಂಶ-2:** *ಏನು ಅಭಿಪ್ರಾಯ?*

12. ಈ ಮೇಲಿನ ಅಂಶಗಳಿಗೆ ನನ್ನ ಅಭಿಪ್ರಾಯ ಈ ಕೆಳಕಂಡಂತೆ ಇರುತ್ತದೆ:

1) ನಕರಾತ್ಮಕವಾಗಿ
2) ಅಂತಿಮ ಅಭಿಪ್ರಾಯದಂತೆ.

## :: ಕಾರಣಗಳು ::

13. **ಅಂಶ-1**: 2016-17ನೇ ಸಾಲಿನ ಸಾಗರ ತಾಲ್ಲೂಕು ರಾಜ್ಯ ಹೆದ್ದಾರಿ-1 ಪಡುಬಿದ್ರೆ-ಚಿಕ್ಕಲಗೋಡು ರಸ್ತೆಯ ಮುಖಾಂತರ ಹೋಗುವ ಗ್ರಾಮದ ರಸ್ತೆಗಳನ್ನು ಅಭಿವೃದ್ದಿ ಪಡಿಸುವುದು ಮತ್ತು ಸಾಗರ ತಾಲ್ಲೂಕು ರಾಷ್ಟ್ರೀಯ ಹೆದ್ದಾರಿ 206 ರ ಹೊನ್ನಾವರ -ತುಮಕೂರು ರಸ್ತೆಯ ಮುಖಾಂತರ ಹೋಗುವ ಗ್ರಾಮದ ರಸ್ತೆಗಳನ್ನು ಅಭಿವೃದ್ದಿ ಪಡಿಸುವುದನ್ನು ಶಿವಮೊಗ್ಗ ಜಿಲ್ಲೆ ಸಾಗರ ತಾಲ್ಲೂಕು ಸಹಾಯಕ ಕಾರ್ಯಪಾಲಕ ಅಭಿಯಂತರರ ಕಛೇರಿ ಪಂಚಾಯತ್ ರಾಜ್ ಇಂಜಿನಿಯರಿಂಗ್ ಉಪ ವಿಭಾಗ ಸಾಗರ ಇವರು ಕೈಗೊಂಡಿದ್ದು, ಸದರಿ ಕಾಮಗಾರಿಗೆ ಸಂಬಂಧಪಟ್ಟ ಅಂದಾಜು ಪಟ್ಟಿ ಮತ್ತು ಅಳತೆ ಪುಸ್ತಕದ ಬಿಲ್ಲುಗಳನ್ನು ಮಾಹಿತಿ ಹಕ್ಕು ಅಡಿಯಲ್ಲಿ ಅರ್ಜಿ ಸಲ್ಲಿಸಿ ಪಡೆದುಕೊಂಡು ಪರಿಶೀಲಿಸಿದಾಗ 7 ಕಾಮಗಾರಿಗಳ ಅಂದಾಜು ಪಟ್ಟಿ ಒಂದೇ ರೀತಿ ಇದ್ದು, ಅಳತೆ ಪುಸ್ತಕದಲ್ಲಿ ಬರೆದಿರುವ ಬಿಲ್ಲುಗಳು ಸಹ ಎಲ್ಲಾ ಕಾಮಗಾರಿಗಳಿಗೂ ಒಂದೇ ಇರುವುದು ಕಂಡು ಬಂದಿದ್ದು, ಕಾಮಗಾರಿಗಳಲ್ಲಿ ಅಂದಾಜು ಪಟ್ಟಿಗೂ, ಅಳತೆ ಪುಸ್ತಕ್ಕಕು, ಮತ್ತು ಕಾಮಗಾರಿಗಳಲ್ಲಿ ನಡೆದಿರುವ ಅಳತೆಗು ತುಂಬಾ ವ್ಯತ್ಯಾಸವಿದ್ದು, ಹಣ ದುರುಪಯೋಗವಾಗಿರುವುದು ಕಂಡು ಬಂದಿರುತ್ತದೆ ಎಂಬ ದೂರಿನ ಆಪಾದನೆಗಳಿಗೆ ಕುರಿತಂತೆ ಆಪಾದಿತ ಸರ್ಕಾರಿ ನೌಕರರ 1 ಮತ್ತು 2 ರವರು ಈ ವಿಚಾರಣೆಯನ್ನು ಎದುರಿಸಿರುತ್ತಾರೆ.

14. ಆಪಾದಿತ ಸರ್ಕಾರಿ ನೌಕರ-1 ಮತ್ತು 2ರವರ ವಿರುದ್ಧ ಹೊರೆಸಿರುವ ಆಪಾದನೆಯನ್ನು ರುಜುವಾತುಪಡಿಸಲು ಶಿಸ್ತಪ್ರಾಧಿಕಾರವು ಈ ಪ್ರಕರಣದ ದೂರುದಾರರಾದ ಶ್ರೀ ಕೆ.ಆರ್. ರಾಜಕುಮಾರ್ ಇವರನ್ನು ಪ್ರಾ.ಸಾ.-1 ರಂತೆ ವಿಚಾರಣೆಗೆ ಒಳಪಡಿಸಿ, ಇವರ ಮುಖಾಂತರ 4 ದಾಖಲೆಗಳನ್ನು ನಿಶಾನೆ ಪಿ-1 ರಿಂದ ಪಿ-4ರಂತೆ ಗುರುತಿಸಿಕೊಂಡಿರುತ್ತದೆ. ಆಪಾದಿತ ಸರ್ಕಾರಿ ನೌಕರರ ವಿರುದ್ಧ ಈ ಸಂಸ್ಥೆಗೆ ದೂರು ಕೊಟ್ಟಿರುವುದಾಗಿ ಪ್ರಾಸಾ 1 ಒಪ್ಪಿದ್ದರೂ ಯಾವ ಮತ್ತು ಎಷ್ಟು ಕಾಮಗಾರಿಗಳಿಗೆ ಸಂಬಂಧಪಟ್ಟಂತೆ ಆರೋಪ ಮಾಡಲಾಗಿದೆ ಎಂಬುದು ತನಗೆ ನೆನಪಿರುವುದಿಲ್ಲ ಆದರೆ, ಕಾಮಗಾರಿ ಸರಿಯಾಗಿ ಆಗಿರುವುದಿಲ್ಲ ಎಂಬ ಆಪಾದನೆ ಮಾಡಿರುವುದು ಸರಿಯಿರುತ್ತದೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ನಿರ್ಧಿಷ್ಟವಾಗಿ ಯಾವ ಆರೋಪ ಅಥವಾ ಆಪಾದನೆಗಳನ್ನು ಮಾಡಲಾಗಿದೆ ಎಂದು ಪ್ರಾಸಾ-1 ಮುಖ್ಯ ವಿಚಾರಣೆಯಲ್ಲಿ ನುಡಿಯಲು ವಿಫಲರಾದ ಕಾರಣ ಅವರನ್ನು ಪ್ರತಿಕೂಲ ಸಾಕ್ಷಿದಾರರನ್ನಾಗಿ ಪರಿಗಣಿಸಿ ಪಾಟೀ ಸವಾಲಿಗೆ ಒಳಪಡಿಸಿದ್ದು, ಮಂಡನಾಧಿಕಾರಿಯವರಿಗೆ ಅವಕಾಶ ಮಾಡಿಕೊಡಲಾಯಿತು. ಮಂಡನಾಧಿಕಾರಿಯವರು ಸಾಕ್ಷಿದಾರರಿಗೆ ಸೂಚಿಸಿದ ಎಲ್ಲಾ ಪ್ರಶ್ನೆಗಳಿಗೂ ಸಕಾರಾತ್ಮಕವಾಗಿ ಉತ್ತರಿಸಿ ದೂರಿನ ಜೊತೆ ಸಲ್ಲಿಸಿರುವ ನಿಶಾನೆ ಪಿ-4 ದಾಖಲೆಗಳನ್ನು ಸಹಾ ಗುರ್ತಿಸಿರುತ್ತಾರೆ.

15. ಆಪಾದಿತ ಸರ್ಕಾರಿ ನೌಕರರ ಪರ ವಕೀಲರು ಪ್ರಾಸಾ-1 ರವರನ್ನು ಪಾಟೀ ಸವಾಲಿಗೆ ಒಳಪಡಿಸಿದಾಗ ದೂರಿನ ಪರಿಶೀಲನೆ ಸಮಯದಲ್ಲಿ ಈ ಸಂಸ್ಥೆಯಿಂದ ನಡೆಸಿದ ತನಿಖೆ ಪ್ರಕಾರ ಆಪಾದಿತ ಸರ್ಕಾರಿ ನೌಕರರು ಯಾವುದೇ ಕರ್ತವ್ಯಲೋಪ ಎಸಗಿರುವುದಿಲ್ಲ ಹಾಗೂ ಸದರಿ ಅಧಿಕಾರಿಗಳ ವಿರುದ್ಧ ಸಲ್ಲಿಸಿರುವ ದೂರನ್ನು ಹಿಂಪಡೆಯುವುದಾಗಿ ಪತ್ರ ಬರೆದಿರುವ ಸಂಗತಿಯನ್ನು ಒಪ್ಪಿರುತ್ತಾರೆ. ಈ ಅಂಶಗಳಿಗೆ ಸಂಬಂಧಪಟ್ಟಂತೆ ಪ್ರಾಸಾ-1ರವರು ***ತಮ್ಮ ಪಾಟೀ ಸವಾಲಿನ ಖಂಡಿಕೆ-8 ಹಾಗೂ 9ರಲ್ಲಿ*** ಈ ಕೆಳಕಂಡಂತೆ ಸಂಗತಿ ಹಾಗೂ ಸನ್ನಿವೇಶಗಳನ್ನೊಪ್ಪಿ ಸಾಕ್ಷ್ಯ ನುಡಿದಿರುತ್ತಾರೆ;

> *" 8. ಸ್ಥಳ ತನಿಖೆ ಮಾಡಿದ ನಂತರ ಎಲ್ಲಾ 7 ಕಾಮಗಾರಿಗಳಿಗೆ ಸಂಬಂಧಪಟ್ಟ ಅಳತೆ ಪುಸ್ತಕ ಮತ್ತು ಇತರೆ ಸಂಬಂಧಪಟ್ಟ ದಾಖಲೆಗಳನ್ನು ಪರಿಶಿಲನೆ ಮಾಡಿ ನಿಯಮಾನುಸಾರ ಕಾಮಗಾರಿಗಳನ್ನು ಅನುಷ್ಠಾನಗೊಳಿಸಲಾಗಿದ್ದು, ಸರ್ಕಾರದ ಹಣವನ್ನು ದುರುಪಯೋಗ ಪಡಿಸಿಕೊಂಡಿರುವುದಿಲ್ಲವೆಂದು ಹಾಗೂ ನಾನು ಸಲ್ಲಿಸಿರುವ ದೂರು ಸತ್ಯಕ್ಕೆ*

*ದೂರವಾಗಿರುತ್ತದೆ ಎಂದು ದಿನಾಂಕ:08/11/2017ರಂದು ಕರ್ನಾಟಕ ಲೋಕಾಯುಕ್ತ ಮುಖ್ಯ ಅಭಿಯಂತರರ ಮೂಲಕ ತನಿಖಾ ವರದಿಯನ್ನು ಸಲ್ಲಿಸಲಾಗಿರುತ್ತದೆ ಎಂಬ ವಿಚಾರ ನಾನು ತಿಳಿದುಕೊಂಡಿರುತ್ತೇನೆ ಎಂದರೆ ಸರಿ. ಶ್ರೀ.ಜಯಕುಮಾರ್, ಕಾರ್ಯಪಾಲಕ ಇಂಜಿನಿಯರ್ ಇವರು ಸಲ್ಲಿಸಿದ ತನಿಖಾ ವರದಿ ಈಗ ನನಗೆ ತೋರಿಸಿದ ದಾಖಲೆಯಾಗಿರುತ್ತದೆ ಎಂದರೆ ಸರಿ ಸದರಿ ತನಿಖಾ ವರದಿಯನ್ನು ನಿ.ಡಿ 1 ಎಂದು ಗುರುತಿಸಲಾಯಿತು.*

*9. ನಿ.ಡಿ-1 ತನಿಖಾ ವರದಿಯನ್ನು ಈ ಪ್ರಾಧಿಕಾರಕ್ಕೆ ಸಲ್ಲಿಸುವ ಮೊದಲೇ ದಿನಾಂಕ:09/10/2011 ರಂದು ನಾನು ಮುಖ್ಯ ಅಭಿಯಂತರರು, ಕರ್ನಾಟಕ ಲೋಕಾಯುಕ್ತ ಇವರಿಗೆ ಪತ್ರವನ್ನು ಬರೆದು ಅಂದಾಜು ಪಟ್ಟಿಯಂತೆ ಕಾಮಗಾರಿಗಳನ್ನು ನಿರ್ವಹಿಸಿರುವುದು ಸರಿಯಿದ್ದು, ಕಾಮಗಾರಿಗಳ ಬಗ್ಗೆ ನನಗೆ ಯಾವುದೇ ಆಕ್ಷೇಪಣೆ ಇರುವುದಿಲ್ಲ ಎಂದು ಸ್ಥಳಕ್ಕೆ ಭೇಟಿ ನೀಡಿದ ನಂತರ ಮನವರಿಕೆಯಾಗಿದ್ದು, ದೂರನ್ನು ಹಿಂಪಡೆದುಕೊಳ್ಳುತ್ತೇನೆ ಎಂದು ತಿಳಿಸಿದ್ದೆ ಎಂದರೆ ಸರಿ. ದೂರು ಹಿಂಪಡೆದುಕೊಳ್ಳುವ ವಿಚಾರದಲ್ಲಿ ನಾನು ಬರೆದ ಪತ್ರ ಈಗ ನೋಡಿದ ದಾಖಲೆಯಾಗಿರುತ್ತದೆ ಎಂದರೆ ಸರಿ ಸದರಿ ಪತ್ರವನ್ನು ನಿ.ಡಿ-2 ಎಂದು ಸಾಕ್ಷಿದಾರರ ಸಹಿಯನ್ನು ನಿ.ಡಿ-2 ಎ ಎಂದು ಗುರುತಿಸಲಾಯಿತು."*

16. ಪ್ರಾರಂಭದಲ್ಲಿ ಪ್ರಾಸಾ-1/ದೂರುದಾರರು ವಿಚಾರಣಾ ಪ್ರಾಧಿಕಾರದ ಹಿತಾಸಕ್ತಿಗೆ ವಿರುದ್ಧವಾಗಿ ಸಾಕ್ಷ್ಯ ನುಡಿದಿರುತ್ತಾರೆಂದು ಕಂಡುಬರುತ್ತಿದ್ದರೂ, ಅವರನ್ನು ಮಂಡನಾಧಿಕಾರಿಯವರು ಪಾಟೀ ಸವಾಲಿಗೊಳಪಡಿಸಿದಾಗ ಈ ಪ್ರಾಧಿಕಾರಕ್ಕೆ ಸಲ್ಲಿಸಿದ ನಿಶಾನೆ ಪಿ-1 ದೂರಿನಲ್ಲಿ ಆಪಾದಿತ ಸರ್ಕಾರಿ ನೌಕರರ ವಿರುದ್ಧ ಆಪಾದನೆ ಮಾಡಿರುವ ಎಲ್ಲಾ ಸಂಗತಿಗಳನ್ನು ಒಪ್ಪಿ ತಾವು ಸಲ್ಲಿಸಿದ ದಾಖಲೆಗಳನ್ನು ಸಹಾ ಗುರ್ತಿಸಿಕೊಂಡಿರುತ್ತಾರೆ. ಆದರೂ ಸಹಾ ನಿಶಾನೆ ಡಿ-1/ತನಿಖಾ ವರದಿಯ ಅಂಶಗಳನ್ನು ಅವರ ಗಮನಕ್ಕೆ ಆಪಾದಿತ ಸರ್ಕಾರಿ ನೌಕರರ ಪರ ವಕೀಲರು ಪಾಟೀ ಸವಾಲು ಸಮಯದಲ್ಲಿ ಗಮನಕ್ಕೆ ತಂದಾಗ ತನಿಖಾಧಿಕಾರಿಯವರ ವರದಿ ಮತ್ತು ಅಭಿಪ್ರಾಯವನ್ನು ದೂರುದಾರರು ಒಪ್ಪಿರುತ್ತಾರೆ. ಅಲ್ಲದೆ ಸದರಿ ತನಿಖಾ ವರದಿ ಸಲ್ಲಿಸಿದ ನಂತರ ಅಂದಾಜು ಪಟ್ಟಿಯಂತೆ ಕಾಮಗಾರಿಗಳನ್ನು ಆಪಾದಿತ ಸರ್ಕಾರಿ ನೌಕರರು ನಿರ್ವಹಿಸಿರುವುದು

ಸರಿಯಿರುವುದರಿಂದ ದೂರನ್ನು ಹಿಂಪಡೆದುಕೊಳ್ಳುವುದಾಗಿ ನಿಶಾನೆ-2ರ ಪತ್ರವನ್ನು ತನಿಖಾಧಿಕಾರಿಗೆ ಬರೆದಿರುವ ಅಂಶವನ್ನು ಪ್ರಾಸಾ-1ರವರು ಒಪ್ಪಿರುವುದರಿಂದ ಅಪಾದಿತ ಸರ್ಕಾರಿ ನೌಕರರ ಮೇಲೆ ಹೊರೆಸಿರುವ ಆಪಾದನೆಗಳನ್ನು ರುಜುವಾತುಪಡಿಸಲು ಶಿಸ್ತು ಪ್ರಾಧಿಕಾರಕ್ಕೆ ಪ್ರಾಸಾ-1ರವರ ಸಾಕ್ಷ್ಯ ಯಾವುದೇ ರೀತಿಯಲ್ಲಿ ಅನುಕೂಲವಾಗುವುದಿಲ್ಲವೆಂದು ನಾನು ಅಭಿಪ್ರಾಯಪಡುತ್ತೇನೆ.

17. ಪ್ರಾಸಾ-1/ಶ್ರೀ ಕೆ.ಆರ್. ರಾಜಕುಮಾರ್ ಈ ಸಂಸ್ಥೆಗೆ ದಿನಾಂಕ: 22/08/2017ರಂದು ನಿಶಾನೆ ಪಿ-1 ದೂರನ್ನು ಸಲ್ಲಿಸಿರುತ್ತಾರೆ. ಸದರಿ ದೂರು **ಸಂಖ್ಯೆ: ಕಂಪ್ಲೇಂಟ್/ಉಪಲೋಕ್/ಬಿಡಿ-2439/2017/ಎಆರ್‌ಎಲ್‌ಓ-1** ಇದರ ಪರಿಶೀಲನಾ ಸಮಯದಲ್ಲಿ ಅಂದಿನ ಗೌರವಾನ್ವಿತ ಉಪಲೋಕಾಯುಕ್ತರ ಆದೇಶದ ಮೇರೆಗೆ ದೂರಿನ ಆಪಾದನೆಗಳನ್ನು ತನಿಖೆ ಮಾಡಿ ವರದಿ ಸಲ್ಲಿಸುವಂತೆ ಸಂಸ್ಥೆಯ ತಾಂತ್ರಿಕ ವಿಭಾಗಕ್ಕೆ ನಿರ್ದೇಶನ ನೀಡಿದ ಹಿನ್ನೆಲೆಯಲ್ಲಿ ಸದರಿ ವಿಭಾಗ ಕಾರ್ಯಪಾಲಕ ಇಂಜಿನಿಯರ್-3 ಶ್ರೀ ಹೆಚ್.ಎನ್. ಜಯಕುಂರ್ ಇವರು ಸಂಬಂಧಪಟ್ಟ ಅಧಿಕಾರಿಗಳಿಗೆ ಮತ್ತು ದೂರುದಾರರಿಗೆ ನೋಟೀಸುಗಳನ್ನು ಜಾರಿ ಮಾಡಿ ದೂರಿನಲ್ಲಿ ಉಲ್ಲೇಖಿಸಿರುವ ಎಲ್ಲಾ ಕಾಮಗಾರಿಗಳು ನಡೆದ ಸ್ಥಳಗಳಿಗೆ ದಿನಾಂಕ: 27/10/2017ರಂದು ಖುದ್ದು ಬೇಟಿ ಕೊಟ್ಟು ಮಹಜರ್ ತಯಾರಿಸಿ, ದಿನಾಂಕ: 08/11/2017ರಂದು ನಿಶಾನೆ ಡಿ-1 ರೀತ್ಯಾ ವರದಿಯನ್ನು ಸಲ್ಲಿಸಿರುತ್ತಾರೆ.

18. ನಿಶಾನೆ ಡಿ-1 ತನಿಖಾ ವರದಿಯ 12ನೇ ಪುಟದಲ್ಲಿರುವ ಖಂಡಿಕೆ-6ರಲ್ಲಿ ತನಿಖಾಧಿಕಾರಿಯು ಈ ಕೆಳಕಂಡ ಅಭಿಪ್ರಾಯವನ್ನು ವ್ಯಕ್ತಪಡಿಸಿರುತ್ತಾರೆ;

> " ಸದರಿ ದೂರಿನ ಪ್ರಕರಣದಲ್ಲಿ ದೂರುದಾರರು ತಮ್ಮ ದೂರಿನಲ್ಲಿ ತಿಳಿಸಿದ ಆರೋಪಗಳನ್ನು ಪರಿಶೀಲಿಸಲಾಗಿ, ದೂರಿನ ಯಾವುದೇ ಅಂಶಗಳು ಕಂಡುಬಂದಿರುವುದಿಲ್ಲ. ಹಾಗೂ ಎಲ್ಲಾ ರಸ್ತೆ ಕಾಮಗಾರಿಗಳನ್ನು ಅಂದಾಜು ಪಟ್ಟಿಯ ಅನ್ವಯ ನಿರ್ವಹಿಸಲಾಗಿರುತ್ತದೆ ಹಾಗೂ ನಿರ್ವಹಿಸಲಾದ ರಸ್ತೆಯ ಕಾಮಗಾರಿಯ ಅಳತೆಗಳು, ಅಳತೆ ಪುಸ್ತಕದಲ್ಲಿ ದಾಖಲಾದ ಅಳತೆಗಳಿಗೆ ಸರಿಹೊಂದುತ್ತಿದ್ದು, ದೂರುದಾರರು ಆರೋಪಿಸಿರುವಂತೆ ಸರ್ಕಾರದ ಹನವನ್ನು ದುರುಪಯೋಗಪಡಿಸಿಕೊಂಡಿಲ್ಲದಿರುವುದು ಕಂಡುಬರುತ್ತದೆ. ಅಲ್ಲದೆ, ದುರುದಾರರು ಸ್ವತಃ ದೂರು ಸಲ್ಲಿಸಿದ ನಂತರ ಸಂಬಂಧಪಟ್ಟ ಸಹಾಯಕ ಕಾರ್ಯಪಾಲಕ ಇಂಜಿನಿಯರ್ ಮತ್ತು ಶಾಖಾಧಿಕಾರಿಗಳೊಂದಿಗೆ ರಸ್ತೆ

ಕಾಮಗಾರಿಗಳನ್ನು ಪರಿಶೀಲಿಸಿದ್ದು, ಅಂದಾಜು ಪಟ್ಟಿಯಂತೆ ಕಾಮಗಾರಿಯನ್ನು ನಿರ್ವಹಿಸಿರುವುದು ಅವರಿಗೆ ಮನವರಿಕೆಯಾಗಿರುತ್ತದೆ ಮತ್ತು ಕಾಮಗಾರಿಗಳ ಬಗ್ಗೆ ಸಲ್ಲಿಸಿರುವ ದೂರಿನಲ್ಲಿ ಈ ಹಿಂದೆ ತಿಳಿಸಿರುವಂತೆ ಅವರ ಯಾವುದೇ ಆಕ್ಷೇಪಣೆಗಳಿರುವುದಿಲ್ಲವೆಂದು ಹಾಗೂ ಈ ಹಿಂದೆ ಕೊಟ್ಟ ದೂರನ್ನು ಹಿಂಪಡೆಯುತ್ತೇನೆ ಎಂದು ಲಿಖಿತವಾಗಿ ಪತ್ರವನ್ನು (ದಿನಾಂಕ: 09/10/2017) ಸಲ್ಲಿಸಿರುತ್ತಾರೆ.

ಮೇಲಿನ ಅಂಶಗಳ ಅನ್ವಯ ದೂರುದಾರರ ದೂರಿನಲ್ಲಿ ಆರೋಪಿಸಿರುವ ಅಂಶಗಳು ಸಾಬೀತಾಗುವ ಯಾವುದೇ ಅಂಶಗಳು ಇಲ್ಲದಿರುವ ಕಾರಣ ಮತ್ತು ಸ್ವತಃ ದೂರುದಾರರೇ ದೂರನ್ನು ಹಿಂಪಡೆಯುತ್ತೇನೆ ಎಂದು ಲಿಖಿತ ಪತ್ರವನ್ನು ನೀಡಿರುವುದರ ಹಿನ್ನೆಲೆಯಲ್ಲಿ **ದೂರುದಾರರ ಆರೋಪಗಳು ಸಾಬೀತಾಗಿಲ್ಲವೆಂದು ಅಭಿಪ್ರಾಯಪಡಲಾಗಿದೆ."**

19. ಆಪಾದಿತ ಸರ್ಕಾರಿ ನೌಕರರು ಅಂದಾಜು ಪಟ್ಟಿಯಂತೆ ಕಾಮಗಾರಿಯನ್ನು ನಿರ್ವಹಿಸಿರುತ್ತಾರೆ ಹಾಗೂ ಕಾಮಗಾರಿಯ ಅಳತೆಗಳು ಅಳ:ತೆ ಪುಸ್ತಕದಲ್ಲಿ ದಾಖಲಾದ ಅಳತೆಗಳಿಗೆ ಸರಿಹೊಂದುತ್ತಿದ್ದು, ದೂರುದಾರರು ಆರೋಪಿಸಿರುವಂತೆ ಸರ್ಕಾರದ ಹಣವನ್ನು ಸದರಿ ಅಧಿಕಾರಿಗಳು ದುರುಪಯೋಗಪಡಿಸಿಕೊಂಡಿರುವುದಿಲ್ಲವೆಂದು ಈ ಸಂಸ್ಥೆಯ ತನಿಖಾಧಿಕಾರಿಯವರು ದಿನಾಂಕ: 08/11/2017ರಂದು ನಿಶಾನೆ ಡಿ-1 ರೀತ್ಯಾ ವರದಿಯನ್ನು ಸಲ್ಲಿಸಿದ್ದರೂ ಸಹಾ ಸದರಿ ವರದಿಯ ಬಗ್ಗೆ ಪರಿಶೀಲನಾಧಿಕಾರಿಯವರು (ಡಿ.ಆರ್.ಇ.-4) ದಿನಾಂಕ:19/11/2019ರಂದು ಖಂಡಿಕೆ-88 ರಿಂದ 106ರವರೆಗೆ ಸಲ್ಲಿಸಿದ ಅಂತಿಮ ಪರಿಶೀಲನಾ ಟಿಪ್ಪಣಿಯಲ್ಲಿ ಯಾವುದೇ ಉಲ್ಲೇಖವಿರುವುದಿಲ್ಲ.

20. ಆಪಾದಿತ ಸರ್ಕಾರಿ ನೌಕರರು ಕಾಮಗಾರಿಗಳನ್ನು ಅಂದಾಜು ಪಟ್ಟಿಯಂತೆ ಕಾರ್ಯಗತಗೊಳಿಸಿದ್ದು, ಸರ್ಕಾರದ ಹಣವನ್ನು ದುರುಪಯೋಗ ಪಡಿಸಿಕೊಂಡಿರುವುದಿಲ್ಲವೆಂದು ಈ ಸಂಸ್ಥೆ ನಡೆಸಿದ ತನಿಖೆಯಿಂದ ದೃಢಪಟ್ಟಿರುವುದರಿಂದ ಹಾಗೂ ದೂರುದಾರರು ಈ ಸಂಗತಿಯನ್ನು ತಮ್ಮ ಪಾಟೀ ಸವಾಲಿನಲ್ಲಿ ಒಪ್ಪಿರುವುದರಿಂದ ಆಪಾದಿತ ಸರ್ಕಾರಿ ನೌಕರರು ಕಳಪೆ ಕಾಮಗಾರಿ ಮಾಡಿ ಸದರಿ ಕಾಮಗಾರಿಗಳಿಗೆ ಸಂಬಂಧಪಟ್ಟಂತೆ ಅಕ್ರಮ ಬಿಲ್ಲುಗಳನ್ನು ತಯಾರಿಸಿ ಹಣ ದುರುಪಯೋಗ ಮಾಡಿಕೊಂಡು ತಮ್ಮ ಕರ್ತವ್ಯ ಪಾಲನೆಯಲ್ಲಿ ನಿಷ್ಠೆ ತೋರದೇ ದುರ್ವರ್ತನೆ ಅಥವಾ ಕರ್ತವ್ಯಲೋಪ ಎಸಗಿರುತ್ತಾರೆ ಎಂಬ ಅಂಶವನ್ನು ರುಜುವಾತುಪಡಿಸಲು

ಶಿಸ್ತುಪಾಧಿಕಾರವು ವಿಫಲವಾಗಿರುತ್ತದೆ ಎಂದು ನಾನು ಅಭಿಪ್ರಾಯಪಡುತ್ತೇನೆ. ಈ ಕಾರಣಗಳಿಗಾಗಿ ಅಂಶ–1ನ್ನು **ನಕರಾತ್ಮಕವಾಗಿ** ಉತ್ತರಿಸುತ್ತೇನೆ.

21. **ಅಂಶ–2:** ಮೇಲ್ಕಂಡ ಕಂಡಿಕೆಗಳಲ್ಲಿ ಚರ್ಚಿಸಿದ ಕಾರಣಗಳಿಗಾಗಿ ಹಾಗೂ ಅಂಶ–1ಕ್ಕೆ ನೀಡಿದ ಉತ್ತರಕ್ಕೆ ಅನುಗುಣವಾಗಿ, ಈ ಕೆಳಕಂಡಂತೆ ಅಭಿಪ್ರಾಯವನ್ನು ನೀಡಿರುತ್ತೇನೆ.

## -:: ಅಭಿಪ್ರಾಯ ::-

ಆಪಾದಿತ ಸರ್ಕಾರಿ ನೌಕರ–1 ಮತ್ತು 2ರವರ ವಿರುದ್ಧ ಹೊರಿಸಿರುವ ಆಪಾದನೆಗಳನ್ನು ರುಜುವಾತುಪಡಿಸಲು ಶಿಸ್ತುಪ್ರಾಧಿಕಾರವು ವಿಫಲವಾಗಿರುತ್ತದೆ.

ಗೌರವಾನ್ವಿತರ ಸೂಕ್ತ ಅನುಮೋದನೆ ಮತ್ತು ಆದೇಶಕ್ಕಾಗಿ ವಿಚಾರಣಾ ವರದಿಯನ್ನು ಮಂಡಿಸಲಾಗಿರುತ್ತದೆ.

14/3/23

(ಸಿ.ಚಂದ್ರಶೇಖರ)
ಅಪರ ನಿಬಂಧಕರು ವಿಚಾರಣೆಗಳು–15,
ಕರ್ನಾಟಕ ಲೋಕಾಯುಕ್ತ,
ಬೆಂಗಳೂರು.

## -: ಅನುಬಂಧಗಳು :-

**1. ಶಿಸ್ತು ಪ್ರಾಧಿಕಾರದ ಪರವಾಗಿ ಸಾಕ್ಷೀಕರಿಸಿ ಸಾಕ್ಷಿಗಳ ಪಟ್ಟಿ:**

| | |
|---|---|
| ಪ್ರಾಸಾ–1 | ಶ್ರೀ ಕೆ.ಆರ್. ರಾಜ್‌ಕುಮಾರ್ (ದೂರುದಾರರು) |

**2. ಆಪಾದಿತ ಸರ್ಕಾರಿ ನೌಕರ–1 ಮತ್ತು 2ರವರ ಪರವಾಗಿ ಸಾಕ್ಷೀಕರಿಸಿ ಸಾಕ್ಷಿಗಳ ಪಟ್ಟಿ:**

| |
|---|
| -- ಇಲ್ಲಾ -- |

**3. ಶಿಸ್ತು ಪ್ರಾಧಿಕಾರದ ಪರವಾಗಿ ಗುರ್ತಿಸಿದ ದಾಖಲೆಗಳ ಪಟ್ಟಿ:**

| | |
|---|---|
| ನಿಶಾನೆ–ಪಿ–1<br>ನಿಶಾನೆ–ಪಿ–2(ಎ) | ದೂರುದಾರರ ದೂರು ಅರ್ಜಿ ದಿನಾಂಕ: 22/08/2017<br>ದೂರುದಾರರು (ಪ್ರಾಸಾ–1) ಸಹಿ |
| ನಿಶಾನೆ–ಪಿ–2<br>ನಿಶಾನೆ–ಪಿ–2(ಎ) | ದೂರುದಾರರ ದೂರು ನಮೂನೆ–1 ದಿನಾಂಕ: 21/08/2017<br>ದೂರುದಾರರ (ಪ್ರಾಸಾ–1) ಸಹಿ |

| | |
|---|---|
| ನಿಶಾನೆ-ಪಿ-3<br>ನಿಶಾನೆ-ಪಿ-3(ಎ) | ದೂರುದಾರರ ದೂರು ನಮೂನೆ-2 ದಿನಾಂಕ: 21/08/2017<br>ದೂರುದಾರರ (ಪ್ರಾಸಾ-1) ಸಹಿ |
| ನಿಶಾನೆ-ಪಿ-4 | ದೂರುದಾರರು ತನ್ನ ದೂರಿನೊಂದಿಗೆ ಲಗತ್ತಿಸಿದ ದಾಖಲೆಗಳ ಪ್ರತಿಗಳು (ಪುಟ 8 ರಿಂದ 125) |

**4. ಆಪಾದಿತ ಸರ್ಕಾರಿ ನೌಕರ-1 ಮತ್ತು 2ರವರ ಪರವಾಗಿ ಗುರ್ತಿಸಿದ ದಾಖಲೆಗಳ ಪಟ್ಟಿ:**

| | |
|---|---|
| ನಿಶಾನೆ-ಡಿ-1 | ಶ್ರೀ ಹೆಚ್.ಎಂ. ಜಯಕುಮಾರ್, ಕಾರ್ಯಪಾಲಕ ಇಂಜಿನಿಯರ್-1, ತಾಂತ್ರಿಕ ವಿಭಾಗ, ಕರ್ನಾಟಕ ಲೋಕಾಯುಕ್ತ, ಬೆಂಗಳೂರು ಇವರು ಸಲ್ಲಿಸಿದ ದಿನಾಂಕ: 08/11/2017ರ ತನಿಖಾ ವರದಿ |
| ನಿಶಾನೆ ಡಿ-2 | ದೂರುದಾರರು ತಾನು ದೂರನ್ನು ಹಿಂಪಡೆದುಕೊಳ್ಳಲು ದಿನಾಂಕ: 09/10/2017ರಂದು ಬರೆದ ಪತ್ರ |

14/3/23

(ಸಿ.ಚಂದ್ರಶೇಖರ)
ಅಪರ ನಿಬಂಧಕರು ವಿಚಾರಣೆಗಳು-15,
ಕರ್ನಾಟಕ ಲೋಕಾಯುಕ್ತ,
ಬೆಂಗಳೂರು.

# ಕರ್ನಾಟಕ ಲೋಕಾಯುಕ್ತ

ನಂ.ಉಪಲೋಕ್-2/ಡಿಇ/128/2020/ಎ.ಆರ್.ಇ-15

ಬಹುಮಹಡಿಗಳ ಕಟ್ಟಡ
ಡಾ:ಬಿ.ಆರ್.ಅಂಬೇಡ್ಕರ್ ವೀದಿ
ಬೆಂಗಳೂರು-560001
ದಿನಾಂಕ:17-03-2023

## -:: ಶಿಫಾರಸು ::-

ವಿಷಯ: 1) ಶ್ರೀ.ಟಿ.ವೆಂಕಟೇಶ್, ಹಿಂದಿನ ಸಹಾಯಕ ಕಾರ್ಯಪಾಲಕ ಅಭಿಯಂತರರು (ನಿವೃತ್ತ), ಪಂಚಾಯತ್ ರಾಜ್ ಇಂಜಿನಿಯರಿಂಗ್ ಉಪ ವಿಭಾಗ, ಸಾಗರ, ಶಿವಮೊಗ್ಗ ಜಿಲ್ಲೆ ಹಾಗೂ 2) ಶ್ರೀ.ಎಂ.ಸಿ.ಕುಮಾರ್, ಸಹಾಯಕ ಅಭಿಯಂತರರು, ಪಂಚಾಯತ್ ರಾಜ್ ಇಂಜಿನಿಯರಿಂಗ್ ಉಪ ವಿಭಾಗ, ಸಾಗರ, ಶಿವಮೊಗ್ಗ ಜಿಲ್ಲೆ, ರವರುಗಳ ವಿರುದ್ಧದ ಇಲಾಖಾ ವಿಚಾರಣೆ ಕುರಿತು.

ಉಲ್ಲೇಖ: 1) ಸರ್ಕಾರಿ ಆದೇಶ ಸಂಖ್ಯೆ.ಗ್ರಾಅಪ 13 ಇಎನ್‌ಕ್ಯೂ 2020, ಬೆಂಗಳೂರು, ದಿನಾಂಕ:08/06/2020.
2) ಉಪಲೋಕಾಯುಕ್ತರು, ಕರ್ನಾಟಕ ರಾಜ್ಯ, ಬೆಂಗಳೂರು ರವರ ನಾಮನಿರ್ದೇಶನ ಆದೇಶ ಸಂ.ಉಪಲೋಕ್-2/ಡಿಇ/128/2020, ಬೆಂಗಳೂರು, ದಿ:18/06/2020.
3) ಅಪರ ನಿಬಂಧಕರು ವಿಚಾರಣೆಗಳು-15, ಕರ್ನಾಟಕ ಲೋಕಾಯುಕ್ತ, ಬೆಂಗಳೂರು ರವರ ವಿಚಾರಣಾ ವರದಿ ದಿ:14/03/2023.

*****

ಸರ್ಕಾರದ ಆದೇಶ ದಿನಾಂಕ:08/06/2020 ರಂತೆ 1) ಶ್ರೀ.ಟಿ.ವೆಂಕಟೇಶ್, ಹಿಂದಿನ ಸಹಾಯಕ ಕಾರ್ಯಪಾಲಕ ಅಭಿಯಂತರರು (ನಿವೃತ್ತ), ಪಂಚಾಯತ್ ರಾಜ್ ಇಂಜಿನಿಯರಿಂಗ್ ಉಪವಿಭಾಗ, ಸಾಗರ, ಶಿವಮೊಗ್ಗ ಜಿಲ್ಲೆ ಹಾಗೂ 2) ಶ್ರೀ.ಎಂ.ಸಿ.ಕುಮಾರ್, ಸಹಾಯಕ ಅಭಿಯಂತರರು, ಪಂಚಾಯತ್ ರಾಜ್ ಇಂಜಿನಿಯರಿಂಗ್ ಉಪವಿಭಾಗ, ಸಾಗರ, ಶಿವಮೊಗ್ಗ ಜಿಲ್ಲೆ, (ಇನ್ನು ಮುಂದೆ ಆಪಾದಿತ

ಸರ್ಕಾರಿ ನೌಕರರುಗಳು/ಅಧಿಕಾರಿಗಳು ಅಂದರೆ ಚಿಕ್ಕದಾಗಿ '1 ಮತ್ತು 2ನೇ ಆ.ಸ.ನೌಕರರು' ಎಂದು ಸಂಭೋದಿಸಲಾಗುವುದು) ರವರುಗಳ ವಿರುದ್ಧ ಶಿಸ್ತು ಪ್ರಕ್ರಿಯೆಯನ್ನು ಕೈಗೊಂಡು ವಿಚಾರಣೆ ಮಾಡಿ, ವರದಿ ಸಲ್ಲಿಸುವಂತೆ ಈ ಸಂಸ್ಥೆಗೆ ಇಲಾಖಾ ವಿಚಾರಣೆಯನ್ನು ವಹಿಸಿರುತ್ತದೆ.

2. ಈ ಸಂಸ್ಥೆಯು ನಾಮನಿರ್ದೇಶನದ ಆದೇಶ ಸಂಖ್ಯೆ:ಉಪಲೋಕ್-2 /ಡಿಇ/128/2020, ಬೆಂಗಳೂರು, ದಿನಾಂಕ:18/06/2020ರ ರೀತ್ಯಾ ಅಪರ ನಿಬಂಧಕರು ವಿಚಾರಣೆಗಳು-15 ರವರಿಗೆ '1 ಮತ್ತು 2ನೇ ಆ.ಸ.ನೌಕರರ' ವಿರುದ್ಧ ದೋಷಾರೋಪಣಾ ಪಟ್ಟಿ ತಯಾರು ಮಾಡಿ, ವಿಚಾರಣೆ ನಡೆಸಿ, ವರದಿ ಸಲ್ಲಿಸುವಂತೆ ಆದೇಶ ಹೊರಡಿಸಿರುತ್ತದೆ.

3. 1ನೇ ಆ.ಸ.ನೌಕರರಾದ ಶ್ರೀ.ಟಿ.ವೆಂಕಟೇಶ್, ಹಿಂದಿನ ಸಹಾಯಕ ಕಾರ್ಯಪಾಲಕ ಅಭಿಯಂತರರು (ನಿವೃತ್ತ), ಪಂಚಾಯತ್ ರಾಜ್ ಇಂಜಿನಿಯರಿಂಗ್ ಉಪವಿಭಾಗ, ಸಾಗರ, ಶಿವಮೊಗ್ಗ ಜಿಲ್ಲೆ ಹಾಗೂ 2ನೇ ಆ.ಸ.ನೌಕರರಾದ ಶ್ರೀ.ಎಂ.ಸಿ.ಕುಮಾರ್, ಸಹಾಯಕ ಅಭಿಯಂತರರು, ಪಂಚಾಯತ್ ರಾಜ್ ಇಂಜಿನಿಯರಿಂಗ್ ಉಪವಿಭಾಗ, ಸಾಗರ, ಶಿವಮೊಗ್ಗ ಜಿಲ್ಲೆ, ರವರುಗಳ ವಿರುದ್ಧ ಈ ಕೆಳಗಿನ ದೋಷಾರೋಪಣೆಗಾಗಿ ಇಲಾಖಾ ವಿಚಾರಣೆಯನ್ನು ನಡೆಸಲಾಯಿತು.

## **ಅನುಬಂಧ-1**
## **ದೋಷಾರೋಪಣೆ**

ಆಪಾದಿತ ಸರ್ಕಾರಿ ನೌಕರ-1 ಆದ ನೀವು, ರಸ್ತೆ ಸುರಕ್ಷತಾ ಯೋಜನೆ 2016-17ನೇ ಸಾಲಿನ ಲೆಕ್ಕ ಶೀರ್ಷಿಕೆ ಅಡಿ

ಸಾಗರ ತಾಲ್ಲೂಕು, ರಾಷ್ಟ್ರೀಯ ಹೆದ್ದಾರಿ–206ರ ಹೊನ್ನಾವರ–ತುಮಕೂರು ರಸ್ತೆಯಿಂದ 1) ಇಸ್ಲಾಂಪುರ, 2) ಖೈರಾ ಮತ್ತು 3) ಮೆಣಸಿನಪುರಕ್ಕೆ ಹೋಗುವ ರಸ್ತೆಗಳನ್ನು ಅಭಿವೃದ್ಧಿ ಪಡಿಸುವುದು ಮತ್ತು ಸಾಗರ ತಾಲ್ಲೂಕು ರಾಜ್ಯ ಹೆದ್ದಾರಿ–01ರ ಪಡುಬಿದ್ರಿ–ಚಿಕ್ಕಲಗೋಡು ರಸ್ತೆಯಿಂದ 1) ಹಿರೇಹಾರ, 2) ಹೊಸಕೊಪ್ಪ 3) ಕೆಂಚಿಗಾನಪುರ ಮತ್ತು 4) ಮಲದೂರಿಗೆ ಹೋಗುವ ರಸ್ತೆಗಳನ್ನು ಅಭಿವೃದ್ಧಿ ಪಡಿಸುವ ಸದರಿ ಕಾಮಗಾರಿಗಳನ್ನು ಅನುಷ್ಠಾನಗೊಳಿಸಿದ್ದು, ಕಾಮಗಾರಿಗಳ ಅಂದಾಜು ತಲಾ ರೂ.5,00,000/– ಗಳಾಗಿದ್ದು, ತುಂಡು ಗುತ್ತಿಗೆ ಕರಾರುಗಳ ಅಡಿ ಕಾಮಗಾರಿಯನ್ನು ವಹಿಸಲು ನಿಮಗೆ ಅಧಿಕಾರ ಇಲ್ಲದಿದ್ದರೂ ಸಹ, 7 ಗುತ್ತಿಗೆದಾರರಿಗೆ ವಹಿಸಿಕೊಟ್ಟಿರುತ್ತೀರಿ ಹಾಗೂ ಸದರಿ ಕರಾರು ಪತ್ರಗಳಲ್ಲಿ ಪ್ರಮುಖವಾದ ಅಂಶಗಳನ್ನು ಭರ್ತಿಮಾಡದೆ ದಿನಾಂಕ, ಕಾಮಗಾರಿಯ ಹೆಸರು, ಲೆಕ್ಕ ಶೀರ್ಷಿಕೆ ನಮೂದಿಸಿರುವುದು, ಸಾಮಾನ್ಯವಾಗಿ ಎಲ್ಲಾ ಕಾಮಗಾರಿಗಳನ್ನು ಮುಕ್ತಾಯಗೊಂಡ ದಿನದಂದೆ ಕಾಮಗಾರಿಯ ಅಳತೆ ನಮೂದಿಸಿದ್ದು ಹಾಗೂ ಚೆಕ್ ಮೆಸರ್‌ಮೆಂಟ್‌ನ್ನು ಮಾಡಿರುವುದು ಕಂಡುಬಂದಿದ್ದು, ಎಲ್ಲಾ ಕಾಮಗಾರಿಗಳನ್ನು ಆಪಾದಿತ ಸರ್ಕಾರಿ ನೌಕರ–2 ಆದ ನೀವು ಗುತ್ತಿಗೆದಾರರಿಂದ ನಿರ್ವಹಿಸಿ ಸರಿಯಾಗಿ ಅಳತೆ ನಮೂದಿಸಿರುವುದಿಲ್ಲ, 1ನೇ ಆಪಾದಿತ ಸರ್ಕಾರಿ ನೌಕರ ಆದ ನೀವು ಚೆಕ್ ಮೆಸರ್‌ಮೆಂಟ್ ಮಾಡಿದ್ದು, ಅಂದಾಜು ಪಟ್ಟಿಯಲ್ಲಿನ ಅಂಶಗಳನ್ನು ಯಥಾವತ್ತಾಗಿ ಅಳತೆ ವಹಿಯಲ್ಲಿ ಏಕಕಾಲಕ್ಕೆ ದಾಖಲಿಸಿದಂತೆ ಕಂಡುಬಂದಿದ್ದು, ಬಿಲ್ಲುಗಳಲ್ಲಿ ದಿನಾಂಕವನ್ನು ನಮೂದಿಸದೆ, ಸಹಿ ಮಾಡಿ, ಆಪಾದಿತ ಸರ್ಕಾರಿ ನೌಕರ–1 ಮತ್ತು 2 ಆದ ನೀವುಗಳು, ಕರ್ತವ್ಯ ಪಾಲನೆಯಲ್ಲಿ ನಿಷ್ಠೆಯನ್ನು ತೋರದೆ, ಕರ್ತವ್ಯಲೋಪವೆಸಗಿ, ದುರ್ನಡತೆ ಎಸಗಿ, ನಿಯಮಗಳನ್ನು

ಉಲ್ಲಂಘಿಸಿ, ಸಾರ್ವಜನಿಕ/ಸರ್ಕಾರಿ ನೌಕರರಿಗೆ ತರವಲ್ಲದ ರೀತಿಯಲ್ಲಿ ನಡೆದುಕೊಂಡು, ಕರ್ನಾಟಕ ನಾಗರೀಕ ಸೇವಾ ನಿಯಮಗಳು (ನಡತೆ) 1966 ನಿಯಮ 3(1)ರ ರಡಿಯಲ್ಲಿ ದುರ್ನಡತೆಯನ್ನೆಸಗಿರುತ್ತೀರಿ.

4. ವಿಚಾರಣಾಧಿಕಾರಿ (ಅಪರ ನಿಬಂಧಕರು ವಿಚಾರಣೆಗಳು–15), ಕರ್ನಾಟಕ ಲೋಕಾಯುಕ್ತ, ಬೆಂಗಳೂರು ರವರು ಮೌಖಿಕ ಮತ್ತು ದಾಖಲಾತಿಗಳ ಸಾಕ್ಷ್ಯಗಳನ್ನು ಕೂಲಂಕುಷವಾಗಿ ಪರಿಶೀಲಿಸಿ, 1ನೇ ಆ.ಸ.ನೌಕರರಾದ ಶ್ರೀ.ಟಿ.ವೆಂಕಟೇಶ್, ಹಿಂದಿನ ಸಹಾಯಕ ಕಾರ್ಯಪಾಲಕ ಅಭಿಯಂತರರು (ನಿವೃತ್ತ), ಪಂಚಾಯತ್ ರಾಜ್ ಇಂಜಿನಿಯರಿಂಗ್ ಉಪವಿಭಾಗ, ಸಾಗರ, ಶಿವಮೊಗ್ಗ ಜಿಲ್ಲೆ ಹಾಗೂ 2ನೇ ಆ.ಸ.ನೌಕರರಾದ ಶ್ರೀ.ಎಂ.ಸಿ.ಕುಮಾರ್, ಸಹಾಯಕ ಅಭಿಯಂತರರು, ಪಂಚಾಯತ್ ರಾಜ್ ಇಂಜಿನಿಯರಿಂಗ್ ಉಪವಿಭಾಗ, ಸಾಗರ, ಶಿವಮೊಗ್ಗ ಜಿಲ್ಲೆ, ರವರುಗಳ ವಿರುದ್ಧ ಮೇಲ್ಕಾಣಿಸಿದ ದೋಷಾರೋಪಣೆಯನ್ನು ಸಾಬೀತುಪಡಿಸುವಲ್ಲಿ ಶಿಸ್ತು ಪ್ರಾಧಿಕಾರವು **'ವಿಫಲವಾಗಿರುತ್ತದೆ'** ಎಂದು ಅಭಿಪ್ರಾಯಿಸಿದ್ದಾರೆ.

5. ವಿಚಾರಣಾಧಿಕಾರಿಯವರು ಸಲ್ಲಿಸಿರುವ ವಿಚಾರಣಾ ವರದಿಯನ್ನು ಪರಿಶೀಲಿಸಲಾಗಿ, ವಿಚಾರಣಾಧಿಕಾರಿಯವರು 1 ಮತ್ತು 2ನೇ ಆ.ಸ.ನೌಕರರ ವಿರುದ್ಧ ದೋಷಾರೋಪಣೆಯನ್ನು ಸಾಬೀತುಪಡಿಸಲು ಒಬ್ಬ ಸಾಕ್ಷಿಯನ್ನು ಅಂದರೆ ಪಿ.ಡಬ್ಲ್ಯೂ–1 ರಂತೆ ವಿಚಾರಣೆಗೆ ಒಳಪಡಿಸಿ, ನಿಶಾನೆ ಪಿ–1 ರಿಂದ ಪಿ–4 ರಂತೆ ದಾಖಲಾತಿಗಳನ್ನು ಗುರುತಿಸಿಕೊಂಡಿದ್ದಾರೆ. 1 ಮತ್ತು 2ನೇ ಆ.ಸ.ನೌಕರರು ತಮ್ಮ ಪರ ಸಾಕ್ಷಿಗಳನ್ನು ವಿಚಾರಣೆ ಮಾಡಿಸಿಕೊಂಡಿರುವುದಿಲ್ಲ. ಆದರೆ, ನಿಶಾನೆ ಡಿ–1 ಮತ್ತು ನಿಶಾನೆ ಡಿ–2 ರಂತೆ ದಾಖಲಾತಿಗಳನ್ನು ಗುರುತಿಸಿಕೊಂಡಿರುತ್ತಾರೆ.

6. 1 ಮತ್ತು 2ನೇ ಆ.ಸ.ನೌಕರರುಗಳ ವಿರುದ್ಧ ಆಪಾದಿಸಿದ ಆರೋಪಗಳ ಬಗ್ಗೆ ವಿಚಾರಣಾಧಿಕಾರಿಗಳು ಸಲ್ಲಿಸಿರುವ ವಿಚಾರಣಾ ವರದಿ ಹಾಗೂ ಅದಕ್ಕೆ ಪೂರಕವಾಗಿ ಸಲ್ಲಿಸಿರುವ ದಾಖಲಾತಿಗಳನ್ನು ಕೂಲಂಕುಷವಾಗಿ ಪರಿಶೀಲಿಸಲಾಗಿ, ವಿಚಾರಣಾಧಿಕಾರಿಗಳು ಸಲ್ಲಿಸಿರುವ ವಿಚಾರಣಾ ವರದಿಯಲ್ಲಿ ಹಸ್ತಕ್ಷೇಪ ಮಾಡಲು ಯಾವುದೇ ಸಕಾರಣಗಳು ಕಂಡುಬಂದಿರುವುದಿಲ್ಲ. ಆದ್ದರಿಂದ, ವಿಚಾರಣಾಧಿಕಾರಿಗಳು ಸಲ್ಲಿಸಿರುವ ವಿಚಾರಣಾ ವರದಿಯನ್ನು ಅಂಗೀಕರಿಸಿ 1ನೇ ಆ.ಸ.ನೌಕರರಾದ ಶ್ರೀ.ಟಿ.ವೆಂಕಟೇಶ್, ಹಿಂದಿನ ಸಹಾಯಕ ಕಾರ್ಯಪಾಲಕ ಅಭಿಯಂತರರು (ನಿವೃತ್ತ), ಪಂಚಾಯತ್ ರಾಜ್ ಇಂಜಿನಿಯರಿಂಗ್ ಉಪವಿಭಾಗ, ಸಾಗರ, ಶಿವಮೊಗ್ಗ ಜಿಲ್ಲೆ ಹಾಗೂ 2ನೇ ಆ.ಸ.ನೌಕರರಾದ ಶ್ರೀ.ಎಂ.ಸಿ.ಕುಮಾರ್, ಸಹಾಯಕ ಅಭಿಯಂತರರು, ಪಂಚಾಯತ್ ರಾಜ್ ಇಂಜಿನಿಯರಿಂಗ್ ಉಪವಿಭಾಗ, ಸಾಗರ, ಶಿವಮೊಗ್ಗ ಜಿಲ್ಲೆ, ರವರುಗಳ ವಿರುದ್ಧ ಹೊರಿಸಲಾದ ಆರೋಪಗಳಿಂದ **'ದೋಷಮುಕ್ತಗೊಳಿಸಲು'** ಈ ಮೂಲಕ ಸರ್ಕಾರಕ್ಕೆ ಶಿಫಾರಸು ಮಾಡಿದೆ.

7. ಸದರಿ ವಿಷಯದಲ್ಲಿ ತೆಗೆದುಕೊಂಡ ಕ್ರಮವನ್ನು ಈ ಪ್ರಾಧಿಕಾರಕ್ಕೆ ತಿಳಿಸತಕ್ಕದ್ದು.

ಸಂಬಂಧಪಟ್ಟ ದಾಖಲೆಗಳನ್ನು ಇದರೊಂದಿಗೆ ಲಗತ್ತಿಸಿದೆ.

17/3/23

(ನ್ಯಾಯಮೂರ್ತಿ ಕೆ.ಎನ್.ಫಣೀಂದ್ರ)
**ಉಪಲೋಕಾಯುಕ್ತ-1**
**ಕರ್ನಾಟಕ ರಾಜ್ಯ**